# ಯಮರೆ ಗ್ರಾಮ ಪಂಚಾಯಿತಿ ಕಾರ್ಯಾಲಯ

ಯಮರೆ ಗ್ರಾಮ, ಸರ್ಜಾಪುರ ಹೋಬಳಿ, ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 562125

ಕ್ರ.ಸಂಖ್ಯೆ: ಸಂ. ಯಮರೆ/ಗ್ರಾ.ಪಂ/154/2023-24 ದಿನಾಂಕ: ದಿನಾಂಕ-01/03/2024

## ನಿರಾಪೇಕ್ಷಣಾ ಪತ್ರ

ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಯಮರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಚಂಬೇನಹಳ್ಳಿ ಗ್ರಾಮದ ಸರ್ವೇ ನಂ 131 ರಲ್ಲಿ 4 ಎಕರೆ 06 ಗುಂಟೆ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ಸಂಖ್ಯೆ ALN (A)(S) SR/68/2013-14 ದಿನಾಂಕ 27/09/2013 ಭೂ ಪರಿವರ್ತನೆಯಗಿರುತ್ತದೆ. ಚಂಬೇನಹಳ್ಳಿ ಗ್ರಾಮದ ಸರ್ವೇ ನಂ 131 ರಲ್ಲಿ 2 ಎಕರೆ 0 ಗುಂಟೆ ಪ್ರದೇಶವು ಮಾನ್ಯ ಜಿಲ್ಲಾಧಿಕಾರಿಗಳವರ ಭೂ ಪರಿವರ್ತನೆ ಆದೇಶ ಸಂಖ್ಯೆ ALN (A)(S) SR/282/2011-12 ದಿನಾಂಕ 30/01/2016 ಭೂ ಪರಿವರ್ತನೆಯಗಿರುತ್ತದೆ. ಚಂಬೇನಹಳ್ಳಿ ಗ್ರಾಮದ ಸರ್ವೇ ನಂ 131 ರಲ್ಲಿ 2 ಎಕರೆ 06 ಗುಂಟೆ ಪ್ರದೇಶವು ಮಾನ್ಯ ಉಪ ವಿಭಾಗಾಧಿಕಾರಿಗಳ ಭೂ ಪರಿವರ್ತನೆ ಆದೇಶ ಸಂಖ್ಯೆ ALN SR (A) 295/2004-05 ದಿನಾಂಕ 15/01/2005 ಭೂ ಪರಿವರ್ತನೆಯಗಿರುತ್ತದೆ. ಒಟ್ಟು 8 ಎಕರೆ 12 ಗುಂಟೆ ಜಮೀನಿನಲ್ಲಿ **M/s Capstone Properties** ರವರು ವಸತಿ ಸಮುಚ್ಚಯ **ನಿರ್ಮಾಣ ಮಾಡಲು ಉದ್ದೇಶಿಸಿರುತ್ತಾರೆ.** ಸದರಿಯವರು ಸದರಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳಾದ ರಸ್ತೆ, ನೀರು ಸರಬರಾಜು, ಒಳಚರಂಡಿ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸುವುದಕ್ಕೆ ನಮ್ಮ ಗ್ರಾಮ ಪಂಚಾಯತಿ ವತಿಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ.

ಸಕ್ಷಮ ಪ್ರಾಧಿಕಾರದ ಅನುಮೋದಿತ ನಕ್ಷೆಯಂತೆ ಉದ್ದೇಶಿತ ವಸತಿ ಸಮುಚ್ಚಯ ಕಾಮಗಾರಿಗಳು ಪೂರ್ಣಗೊಂಡ ನಂತರ ಗ್ರಾಮ ಪಂಚಾಯತಿಗೆ ಕಟ್ಟಬೇಕಾದ ವಿವಿಧ ತೆರಿಗೆಗಳನ್ನು ಹಾಗೂ ಕುಡಿಯುವ ನೀರಿಗೆ ಸಂಬಂಧಪಟ್ಟಂತಹ ಹಣವನ್ನು ಸಂದಾಯ ಮಾಡಿದ ನಂತರ ಅವಶ್ಯವಿದ್ದಲ್ಲಿ ಈಗಿರುವ ನೀರಿನ ಮೂಲಗಳಿಂದ ಕುಡಿಯುವ ನೀರನ್ನು ಸರಬರಾಜು ಮಾಡಲಾಗುವುದೆಂದು ಈ ಮೂಲಕ ದೃಡೀಕರಿಸುತ್ತೇವೆ. ಕುಡಿಯುವ ನೀರಿನ ಸಮಸ್ಯೆಗಳು ಉದ್ಭವಿಸಿದಲ್ಲಿ ಸರಬರಾಜಿನಲ್ಲಿ ವ್ಯತ್ಯಾಸವಾದಲ್ಲಿ ಕಂಡು ಬಂದಲ್ಲಿ ಸಂಪೂರ್ಣ ಸ್ಥಗಿತಗೊಳಿಸಲಾಗುವುದೆಂದು ಕೂಡ ತಿಳಿಯತಕ್ಕದು ಹಾಗೂ ಸದರಿ ಜಮೀನಿಗೆ 40 ಅಡಿಗಳ ರಸ್ತೆ ಸಂಪರ್ಕವು ಇರುತ್ತದೆ.

ಸದರಿ ವಸತಿ ಸಮುಚ್ಚಯಕ್ಕೆ ಕುಡಿಯುವ ನೀರಿನ ಸಂಪರ್ಕ ನೀಡಲು ಯಾವುದೇ ಆಕ್ಷೇಪಣೆ ಇರುವುದಿಲ್ಲವೆಂದು ಈ ಮೂಲಕ ಸಂಬಂದಪಟ್ಟವರಿಗೆ ನಿರಾಪೇಕ್ಷಣಾ ಪತ್ರವನ್ನು ನೀಡಲಾಗಿದೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಯಮರೆ ಗ್ರಾಮ ಪಂಚಾಯಿತಿ
ಆನೇಕಲ್ ತಾಲ್ಲೂಕು
ಸರ್ಜಾಪುರ ಹೋ॥ ಆನೇಕಲ್ ತಾ॥
ಬೆಂಗಳೂರು-ನಗರ ಜಿಲ್ಲೆ